ಒಂದಾಣೆ ಮಾಲೆ 258

# ಸರ್ವಜ್ಞ ವಚನಗಳು

## (ಭಾಗ ೩)

❋

ಸಂಗ್ರಾಹಕ:
ಕುಡ್ಪಿ ವಾಸುದೇವ ಶೆಣೈ,
ಸಂಪಾದಕ: "ಪ್ರಭಾತ," ಮಂಗಳೂರು.

❋

1959

ಬೆಲೆ: ೧ ಆಣೆ.

ಒಂದಾಣೆ ಮಾಲೆ — ಮಂಗಳೂರು.

# ಪ್ರತಿ ವಾರವೂ ಕೊಂಡುಕೊಳ್ಳಿರಿ!

"ಒಂದಾಣೆ ಮಾಲೆ"ಯ ಪುಸ್ತಕಗಳು, ಪ್ರತಿ ವಾರ ಪ್ರಕಟವಾಗುತ್ತಿವೆ. ಹೊಸ ಹೊಸ ವಿಷಯಗಳ ಮೇಲೆ ಪುಸ್ತಕಗಳು ಹೊರಡುತ್ತಿವೆ. 1954ನೇ ಸಪ್ಟಂಬರದಿಂದ 1959ನೇ ನವಂಬರ ತಿಂಗಳ ನಾಲ್ಕನೆಯ ವಾರದ ವರೆಗೆ 255 ಪುಸ್ತಕಗಳು ಪ್ರಕಟವಾಗಿದ್ದು, ಇನ್ನೂ ಪ್ರತಿ ವಾರ ಒಂದೊಂದು ಹೊಸ ಪುಸ್ತಕವು ಹೊರಡುತ್ತಲೇ ಇದೆ.

258 ಆಣೆಗಳಿಗೆ 'ಒಂದಾಣೆ ಮಾಲೆ'ಯು, ಹೊದಿಕೆ ಕೂಡಿ, ಒಟ್ಟು 4950 ಪುಟಗಳನ್ನು ಕೊಟ್ಟಿರುತ್ತದೆ. ಇಷ್ಟು ಮೊಬಲಗಿಗೆ ಇಷ್ಟು ಪುಟಗಳನ್ನು ಬೇರೆ ಎಲ್ಲಿಯೂ ಯಾವ ಪ್ರಕಟಣೆಯೂ ಕೊಟ್ಟಿಲ್ಲ.

ವಿದ್ವಾಂಸರು ಮಾತ್ರ 'ಒಂದಾಣೆ ಮಾಲೆ'ಗೆ ಬರೆಯುತ್ತಾರೆ. 'ಅಶ್ಲೀಲ' ಎಂಬ ಅಂಶವೇ 'ಒಂದಾಣೆ ಮಾಲೆ'ಯ ಪ್ರಕಟಣೆಗಳಲ್ಲಿರುವುದಿಲ್ಲ.

'ಒಂದಾಣೆ ಮಾಲೆ' ಪುಸ್ತಕಗಳು ಚಿಕ್ಕ ವಿದ್ಯಾರ್ಥಿಗಳಿಂದ ವಯೋವೃದ್ಧರ ವರೆಗೆ, ಪ್ರತಿಯೊಬ್ಬನಿಗೂ ಆವಶ್ಯ ಇವೆ. ಇಷ್ಟು ಸುಲಭ ಬೆಲೆಯಲ್ಲಿ ಇಷ್ಟು ಉತ್ತಮ ಸಾಹಿತ್ಯವು, ಈ ಮೊದಲು ಎಲ್ಲಿಯೂ ಒದಗಿಸಲ್ಪಟ್ಟಿಲ್ಲ.

'ಒಂದಾಣೆ ಮಾಲೆ' ಪುಸ್ತಕಗಳನ್ನು ಟಪ್ಪಾಲು ದ್ವಾರಾ ತರಿಸಿಕೊಳ್ಳುವವರು ರೂ. 4—8—0ನ್ನು ಮನಿಯಾರ್ಡರ್ ಮೂಲಕ ಕಳಿಸತಕ್ಕದ್ದು. ಡಿಪಾಜಿಟ್ ಇಡುವವರು ಮಾತ್ರ ಏಜನ್ಸಿಗಾಗಿ ಬರೆದುಕೊಳ್ಳತಕ್ಕದ್ದು.

ವಾರಕ್ಕೆ ಕೇವಲ ಒಂದಾಣೆ ವ್ಯಯದಿಂದ ಒಂದು ಉತ್ಕೃಷ್ಟ—ಉಪಯುಕ್ತ ಪುಸ್ತಕವನ್ನು ಹೊಂದುವ ಈ ಯೋಜನೆಯ ಸದುಪಯೋಗ ಮಾಡಿಕೊಳ್ಳಿರಿ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ,
ಮಂಗಳೂರು-1.

ANNA PUBLICATIONS, CAR STREET, MANGALORE-1.

# ಸರ್ವಜ್ಞ ವಚನಗಳು

(ಭಾಗ ೩)

ಆತ್ಮಗಂಗೆಯು ಬಿಂದು । ಜ್ಯೋತಿಲಿಂಗವ ಕಾಣ್ವೆ ।
ಪಾತಕಕೋಟಿ ಹರಿವುದು ಶುದ್ಧ ಪರ ।
ಮಾತ್ಮನೇ ಅಕ್ಕು. ಸರ್ವಜ್ಞ ॥ ೨೦೫ ॥

ಮಾತು ಬಂದೆಡೆಯಲ್ಲಿ । ಸೋತು ಹೋದವ ಜಾಣ ।
ಮಾತಿಗೆ ಮಾತು ಮಥನಿಸೆ ವಿಧಿ ಬಂದು ।
ಕೊಂಡಿಹುದು. ಸರ್ವಜ್ಞ ॥ ೨೦೬ ॥

ಸೀತೆ ಹೋದುದು ಭಂಗ । ಸೇತು ಕಟ್ಟಿದ ಭಂಗ ।
ಮಾತಿನ ಭಂಗ ರಾಮಂಗೆ, ರಾವಣಗೆ ।
ಯಾತರ ಭಂಗ. ಸರ್ವಜ್ಞ ॥ ೨೦೭ ॥

ನವ ನಾಳವನು ಕಟ್ಟಿ । ಶಿವಧ್ಯಾನದೊಳುಯಿರಲು ।
ನವಖಂಡ ಪೃಥ್ವಿಯೊಳಗಣ ಮಾತೆಲ್ಲ ।
ಕವಿಯೊಳಗಿಹುದು. ಸರ್ವಜ್ಞ ॥ ೨೦೮ ॥

ಆಗಿಲ್ಲ ಹೋಗಿಲ್ಲ । ಮೇಗಿಲ್ಲ ಕೆಳಗಿಲ್ಲ ।
ತಾಗಿಲ್ಲ ತಪ್ಪು ತಡೆ ಇಲ್ಲ ಲಿಂಗಕ್ಕೆ ।
ದೇಗುಲವೆಯಿಲ್ಲ. ಸರ್ವಜ್ಞ ॥ ೨೦೯ ॥

ಆತ್ಮಜ್ಯೋತಿಯು ಬೆಳಗೆ । ಪ್ರೀತಿಯಿಂದರಿದಡೆ ।
ಸೂತಕವು ಇಲ್ಲ ಭಯವಿಲ್ಲ ಪಂಚ ಮಹಾ ।
ಪಾತಕವು ಇಲ್ಲ. ಸರ್ವಜ್ಞ ॥ ೨೧೦ ॥

ಜ್ಞಾನವುಳ್ಳವನೊಡಲು । ಭಾನುವಿನಂತಕ್ಕು ।
ಜ್ಞಾನವಿಲ್ಲದರ ಬರಿಯೊಡಲು ಹಾಳೂರ ।
ಶ್ವಾನನಂತಕ್ಕು. ಸರ್ವಜ್ಞ ॥ ೨೧೧ ॥

ಒಳಗೂ ಜ್ಯೋತಿಯಾ | ಬೆಳಗು ಬಲ್ಲಾತಂಗೆ |
ಅಳಿವುಳಿವು ಕಷ್ಟಕಳವಿಲ್ಲಯೆಂದಿಗೂ |
ಹಳಃವಿಲ್ಲ ಕಾಣೋ. ಸರ್ವಜ್ಞ || ೨೧೨ ||

ಅರಿತೆನೆಂಬುವಗೊಂದು | ಕುರುಹುಂಟು ಬೊಮ್ಮಕ್ಕೆ |
ಅರಿತೆನೂ ಎಂಬ ಅರುಹು ತಾನರಿದಡೇ |
ಕುರುಹಿನ ಬೊಮ್ಮ. ಸರ್ವಜ್ಞ || ೨೧೩ ||

ತತ್ತ್ವಮಸಿಯೆಂತೆಂಬ | ಅರ್ಥವನು ಅರಿಯದೇ |
ತುತ್ತು ಸವಿಯೆಂದು ಉಣಕಲಿತ ಯೋಗಿಗಿಂ |
ನೆತ್ತಣಾತತ್ತ್ವ. ಸರ್ವಜ್ಞ || ೨೧೪ ||

ಅರಿವನರಿದಡೆ ಜೀವ | ನೆರೆ ಸದಾಶಿವನಕ್ಕು |
ಅರುವಿನಾ ಕುರುಹಾ ಮರೆತಡೇ ಹರಿಬ್ರಹ್ಮ |
ರರವಿನಂತಕ್ಕು. ಸರ್ವಜ್ಞ || ೨೧೫ ||

ಕಾಯುದಿಂದ್ರಿಯುದಡಿಯು | ಜೀವವಾಯುದರಿಂದ |
ಕಾಯುವ ಬ್ರಹ್ಮಸೃಷ್ಟಿಯೆಂಬುವ ನಾಯು |
ಬಾಲ ನೋಡೆಂದ. ಸರ್ವಜ್ಞ || ೨೧೬ ||

ತನ್ನ ತಾನರಿತವನ | ಮುನ್ನ ಹೊದ್ದಳು ಮಾಯೆ |
ಉನ್ನಂತವಾದ ಗಜವೇರಿ ಬಪ್ಪಾತ |
ಕುನ್ನಿಗಂಜುವನೆ. ಸರ್ವಜ್ಞ || ೨೧೭ ||

ಒಂದೊಂದು ಹನಿಬಿದ್ದು | ನಿಂದು ಹೆಮ್ಮಡುವಕ್ಕು |
ಸಂದಜ್ಞಾನಿಗಳ ಒಡನಾಡೆ ಪರಬ್ರಹ್ಮ |
ಮುದವಕ್ಕು. ಸರ್ವಜ್ಞ || ೨೧೮ ||

ಇಲ್ಲದಾ ಮಾಯೆಯನು | ಇಲ್ಲೆನ್ನಲರಿಯದೇ |
ಬಲ್ಲಿದಾ ಮಾಯೆಯೆನಬೇಡ ತಿಳಿಯಲ್ಕೆ |
ಎಲ್ಲಿಯಾ ಮಾಯೆ. ಸರ್ವಜ್ಞ || ೨೧೯ ||

ಅದ್ವೈತಿ ತಾನಾಗಿ | ಯುದ್ಧವಿಸ್ನಾರೊಡನೆ |
ಬುದ್ಧಿಯಿಂ ತನ್ನ ತಾನರಿದವಗೆ ಲೋಕದ |
ಗುದ್ದಾಟವ್ಯಾಕೆ. ಸರ್ವಜ್ಞ || ೨೨೦ ||

ಬೊಮ್ಮವನು ತಿಳಿದಡೇ | ಸುಮ್ಮಗೆಯಿರಬೇಕು |
ಬೊಮ್ಮವಾನರಿಡೂ ಉಸುರಿದರೆ ಕಳ್ಳ ಹೋಗಿ |
ಕೆಮ್ಮಿದಂತಕ್ಕು. ಸರ್ವಜ್ಞ || ೨೨೧ ||

ಅಂತಿರ್ದಯಿಂತಿರ್ದ | ಯಿಂತಿರ್ದನೆನಬೇಡ |
ಕಂತೆಯನು ತೊಟ್ಟು ತಿರಿದುಂಬ ಯೋಗಿ ತಾ |
ನೆಂತಿರ್ದರೇನು. ಸರ್ವಜ್ಞ || ೨೨೨ ||

ಬಲ್ಲೆನೆನ್ನುವ ಮಾತು | ಯೆಲ್ಲವೂ ಹುಸಿ ನೋಡಾ |
ಬಲ್ಲಡೇ ಬಲ್ಲಾನೆನಬೇಡ ಸುಮ್ಮನಿರ |
ಬಲ್ಲಾತ ಬಲ್ಲ. ಸರ್ವಜ್ಞ || ೨೨೩ ||

ಸತ್ತು ತಾ ಹುಟ್ಟುವರೆ | ಮಿಥ್ಯದಾ ನುಡಿಯೇಕೆ |
ಬಿತ್ತಿದಾ ಬೀಜ ಬೆಳೆವಂತೆ ವೃಕ್ಷ ತಾ |
ಸತ್ತು ಹುಟ್ಟುವುದೇ. ಸರ್ವಜ್ಞ || ೨೨೪ ||

ಬೇಡಮುಕ್ಕಿದರುಂಬ | ಕೂಡನು ಜಾತಿಯನು |
ರೂಢಿಗೀಶ್ವರನ ಬೆರೆದಾತ ಸಂಸಾರ |
ಕೂಡಹೊಂದುವನೇ. ಸರ್ವಜ್ಞ || ೨೨೫ ||

ಮುತ್ತು ನೀರಲಿ ಹುಟ್ಟಿ | ಮತ್ತೆ ನೀರಪ್ಪುದೇ |
ಚಿತ್ತವನರಿದಾ ಶಿವಯೋಗಿ ಸಂಸಾರ |
ದತ್ತ ಹೊಂದುವನೆ. ಸರ್ವಜ್ಞ || ೨೨೬ ||

ತಿಳಿಯು ಕಾಸಿದ ತುಪ್ಪ | ಮರಳಿ ಹಾಲಪ್ಪುದೇ |
ಕಳೆ ಬೆಳಗನರಿತಾ ಶಿವಯೋಗಿ ಸಂಸಾರ |
ದೊಳಗೆ ಸಿಲ್ಕುವನೇ. ಸರ್ವಜ್ಞ || ೨೨೭ ||

ಓಡುವಂಣ್ಣೆಲಿ ಹುಟ್ಟಿ | ಕೂಡುವುದೆ ಜಾತಿಯನು |
ರೂಢಿಗೀಶ್ವರನ ಬೆರೆದಾತ ಸಂಸಾರ |
ಕೂಡ ಹೊಂದುವನೆ. ಸರ್ವಜ್ಞ || ೨೨೮ ||

ಆನೆ ಮುಕುರದೊಳಗೆ | ಬಾನವೊಳಾಶಿಯಡಗ |
ಲೇಸುವೂಣಯವೊ ಜಗದೊಳಗೆ ಶಿವಯೋಗಿ |
ಮೌನದಿಂದಿರುವ. ಸರ್ವಜ್ಞ || ೨೨೯ ||

ಅಂಜಲೂ ಹೊಲೆಯಲ್ಲ | ಸಂಜೆಗತ್ತಲು ಅಲ್ಲ |
ಅಂಜಿಕೆಯಿಲ್ಲ ಭಯವಿಲ್ಲ ಭವನಕೃಪೆ |
ಸಂಜಾತನಿರಲು. ಸರ್ವಜ್ಞ || ೨೩೦ ||

ಆನೆ ಕನ್ನಡಿಯಲ್ಲಿ | ತಾನಡಗಿಯಿಪ್ಪಂತೆ |
ಜ್ಞಾನವುಳ್ಳವರ ಹೃದಯದೊಳು ಪರಶಿವನು |
ತಾನಡಗಿಯಿರ್ಪನು. ಸರ್ವಜ್ಞ || ೨೩೧ ||

ಆನೆ ನೀರಾಟದೊಳು | ಮೀನು ಕಂಡಂಜುವುದೇ |
ಹೀನ ಮನದವರ ಬಿರುನುಡಿಗೆ ತತ್ತ್ವದ |
ಜ್ಞಾನಿ ಅಂಜುವನೆ. ಸರ್ವಜ್ಞ || ೨೩೨ ||

ಆನೆ ಗಯ್ಯಾಳಿಯಾಗೆ | ಜ್ಞಾನಿ ಮೂರ್ಖನು ಆಗೆ |
ಮಾನವತಿಯರು ಹಾದರಿಗರಾದರೇ |
ಯಾರು ಹೇಳುವರು. ಸರ್ವಜ್ಞ || ೨೩೩ ||

ಆನೆ ಬೀದಿಲಿ ಬರಲು | ಶ್ವಾನತಾ ಬಗಳುವುದು |
ಶ್ವಾನನಂತಾನೆ ಬಗುಳೆ ಆನೆಯಾ |
ಮಾನವೇ ಹಾನಿ. ಸರ್ವಜ್ಞ || ೨೩೪ ||

ಜಾರೆಯಾ ಶಿಶುವರಲೆ | ಹಾರೈಸಿ ಪತಿಕರೆಯೆ |
ಜಾರೆಯದನರಿತೂ ನಗುವಂತೆ ಜ್ಞಾನಿ ಸಂ |
ಸಾರಕ್ಕೆ ನಗುವ. ಸರ್ವಜ್ಞ || ೨೩೫ ||

ಸತ್ತ್ರಹಾಗಿರುಯೆಂದ | ಡಿತ್ತ್ರಣಾ ಭಯುವಯ್ಯ |
ಕತ್ತ್ರೆ ಮಾನವರೂ ತಿಳಿಯುಕು ಇದು ಮುಹಾ |
ತತ್ತ್ವದ ನುಡಿಯುು. ಸರ್ವಜ್ಞ ॥ ೨೩೬ ॥

ಎಲ್ಲ ಶಿವಶಿವಯೆಂದ ! ರೆಲ್ಲಿಯಹಾ ಭಯುವಯ್ಯ |
ಯೆಲ್ಲರೂ ಶಿವನ ನೆನೆದರೆ ಕೈಲಾಸ |
ಇಲ್ಲೆ ಇಹುದೆಂದ. ಸರ್ವಜ್ಞ. ॥ ೨೩೭ ॥

ಬಲ್ಲೆನೆಂದೆಂಬುವರು | ಎಲ್ಲರೂ ಹಿರಿಯುರೇ |
ಸೊಲ್ಲಿನ ಭೇದವನರಿದಡೇ ಕಿರಿಯು ತಾ |
ಯೆಲ್ಲರಿಗೆ ಹಿರಿಯು. ಸರ್ವಜ್ಞ ॥ ೨೩೮ ॥

ಲೆತ್ತ್ರವನು ಹಾಕಿದರೆ | ಎತ್ತ ಬಿದ್ದರು ದಾಯು |
ತತ್ತ್ವವನು ತಿಳಿದಾ ಶಿವಯೋಗಿ ತಾನಿನ್ನು |
ಒತ್ತ್ರಸಾಡಿದಡೇನು. ಸರ್ವಜ್ಞ ॥ ೨೩೯ ॥

ಆನೆ ಮೇಲಿದ್ದವರು | ಶ್ವಾನನಿಗಂಜುವರೇ |
ಜ್ಞಾನಹೃದಯುದಲಿ ನೆಲೆಸಿ ಶಿವಯೋಗಿ ತಾ |
ಹೀನಗಂಜುವನೇ. ಸರ್ವಜ್ಞ ॥ ೨೪೦ ॥

ಜ್ಞಾನಿಯುಜ್ಞಾನಿಗೆ | ತಾನೊಂದು ಕುರುಹೆಂಟು |
ಯೇನೇನ ಅವನು ನುಡಿದರೇ ಜ್ಞಾನಿ ತಾ |
ಮೌನದಿಂದಿರುವ. ಸರ್ವಜ್ಞ ॥ ೨೪೧ ॥

ಜಾತಿಜಾತಿಗೆ ವೈರ | ನೀತಿ ಮೂರ್ಖಗೆ ವೈರ |
ಪಾತಕಾವೈರ ಸುಜನಗೇ ಅರಿದವರಿ |
ಗ್ಯಾತರ ವೈರ. ಸರ್ವಜ್ಞ. ॥ ೨೪೨ ॥

ತನ್ನತಾನರಿದಾತ | ತನ್ನ ಜ್ಞಾನದೊಳಡಗಿ |
ತನ್ನ ಬಂಧುಗಳ ಸಲೆ ಬಿಟ್ಟು ಪರ ಬೊಮ್ಮ |
ದುನ್ನತಿಯೊಳಿಪ್ಪ. ಸರ್ವಜ್ಞ. ॥ ೨೪೩ ॥

ಆದಿಗೆ ಬೆಲೆಯಿಲ್ಲ । ಭೇದಕ್ಕೆ ಹೊಲಬಿಲ್ಲ ।
ಸಾಧಕಗೆ ಆವಾ ಭಯುವಿಲ್ಲ ಜ್ಞಾನಿಗೆ ।
ವಾದಗಳು ಇಲ್ಲ. ಸರ್ವಜ್ಞ ॥ ೨೪೪ ॥

ತನ್ನತಾನರಿತರೇ । ಭಿನ್ನಭೇದಗಳಿಲ್ಲ ।
ತನ್ನವಾರಿಲ್ಲದವಗರಿಯಿಲ್ಲ ತ್ರೈಭುವನ ।
ತನ್ನೊಳಗಹುದು. ಸರ್ವಜ್ಞ ॥ ೨೪೫ ॥

ತನ್ನತಾನರಿಯುವದು । ತನ್ನ ಬಿಟ್ಟಿರುವದೂ ।
ತನ್ನೊಲ್ಲದವರ ತೊರೆಯುವದು ಜ್ಞಾನ ತಾ ।
ಬಿನ್ನಾಣವಲ್ಲ. ಸರ್ವಜ್ಞ ॥ ೨೪೬ ॥

ಆತ್ಮಗಂಗೆಯು ಮಿಂದು । ಜ್ಯೋತಿಯುನು ತಿಳಿಯಲ್ಕೆ ।
ಪಾತಕವು ಕೋಟಿ ಹರಿಯುವುದು ಶುದ್ಧಪರ ।
ಮಾತ್ಮನೇಯುಕ್ಕು. ಸರ್ವಜ್ಞ ॥ ೨೪೭ ॥

ತತ್ತ್ವವೆಂಬುದು ತನ್ನ । ಹಿತ್ತಲಾ ಗಿಡನೋಡ ।
ಮತ್ತೊಬ್ಬ ಮುನಿದುಕೊಳಲರಿಯು ಜ್ಞಾನದ ।
ಬಿತ್ತು ಲೇಸೆಂದ. ಸರ್ವಜ್ಞ ॥ ೨೪೮ ॥

ಇಲ್ಲಿಲ್ಲಯೆಂಬುವರ । ಇಲ್ಲಿಯೇ ಅರಸಿದಡೆ ।
ಇಲ್ಲಿದಿಲ್ಲೆಂದು ಅರಸಿದಡೆ ಜಗವೆಲ್ಲ ।
ಇಲ್ಲಿಗಳವಕ್ಕು. ಸರ್ವಜ್ಞ ॥ ೨೪೯ ॥

ದೊರಕಿದ್ದನುಂಡುಂಡು । ದೊರಕಿದ್ದನುಟ್ಟುಟ್ಟು ।
ದೊರಕಿದಲಿ ಶಯುನಗೈವಾತ ಲೋಕಕ್ಕೆ ।
ನಿರಾಕಾರನಕ್ಕು. ಸರ್ವಜ್ಞ ॥ ೨೫೦ ॥

ಬಲ್ಲೆನೆಂಬುವ ಮಾತು । ಬಲ್ಲಿ ತಾಗಿಯೆ ಇರಲು ।
ತಲ್ಲಣವನೆಲ್ಲ ಶಿವನೀವ ಪದವಿಯಿ ।
ದ್ದಲ್ಲಿಗೇ ಬಹುದು. ಸರ್ವಜ್ಞ ॥ ೨೫೧ ॥

ಮುಂದೆ ಬಂದೀತೆಂದು । ಸಂದೇಹಗೊಳಬೇಡ ।
ಬಂದದ್ದನುಂಡು ಸುಖಿಯಾಗು ರೋಗ ಬಂ ।
ದಂದಿಗೇ ನರಳು. ಸರ್ವಜ್ಞ ॥ ೨೫೨ ॥

ಒಂದು ಮನಜಿತವಕ್ಕು । ಒಂದು ಮನ ಜಡನಕ್ಕು ।
ಒಂದು ಮನ ಮೋಕ್ಷಪದವಕ್ಕು ಮಾನವಗೆ ।
ದ್ವಂದ್ವಮನ ಕೇಡು. ಸರ್ವಜ್ಞ ॥ ೨೫೩ ॥

ಪಂಚವಿಷಯದ ತತ್ತ್ವ । ಚಂಚಲವನರಿಯದೇ ।
ಹೆಂಚನೇ ಹಿಡಿದು ತಿಂದುಂಬ ಯೋಗಿ ತಾ ।
ಪಂಚಮುಖನಹನು. ಸರ್ವಜ್ಞ ॥ ೨೫೪ ॥

ಅದ್ವೈತವನಾಡಿ । ಇದ್ದುದನು ಹೋಗಾಡಿ ।
ಹೊದ್ದೆ ಹೆಮ್ಮರನ ತುದಿಗೇರಿ ಅಣಿತಪ್ಪಿ ।
ಬಿದ್ದು ಸತ್ತಂತೆ. ಸರ್ವಜ್ಞ ॥ ೨೫೫ ॥

ಅಡವಿಯಲಿ ತಪದಲ್ಲಿ । ದೃಢತನದೊಳಿದ್ದಡೆ ।
ಮಡಿವಲ್ಲಿ ಶಿವನ ಮರೆದಡೇ ಭವ ಬೆನ್ನ ।
ಬಿಡದೆ ತಾ ಬಹುದು. ಸರ್ವಜ್ಞ ॥ ೨೫೬ ॥

ಆವಾವ ಜೀವವನು । ಹೇವವಿಲ್ಲದೆ ಕೊಂದು ।
ಸಾವಾಗ ಶಿವನ ನೆನೆದರೆ ಶಿವ ಬಂದು ।
ಕಾವನೇ ನೋಡು. ಸರ್ವಜ್ಞ ॥ ೨೫೭ ॥

ಕಾಣಿಸೂವಾತ್ಮನವು । ಕಾಣನೇ ಕವಿಯಿರೋ ।
ಕಾಣಲೂ ಬಿಡಲೂ ಕರ್ಮಗಳನು ತನ್ನ ।
ಆಣೆಯಿಟ್ಟಂತೇ. ಸರ್ವಜ್ಞ ॥ ೨೫೮ ॥

ಧ್ಯಾನ ಹೊಸಬತ್ತಿಯನು । ಮೌನತಳಿದೊಪ್ಪಿಸು ।
ಹಾನಿಭಾವವನು ಸರಿಪ ಬೆಳಗಿನ ಜ್ಯೋತಿ ।
ಜ್ಞಾನದಾ ಪಂಜೆಯೂ. ಸರ್ವಜ್ಞ ॥ ೨೫೯ ॥

ಅರಿವೆಂಬುದಾತ್ಮಂಗೆ | ನೆರೆ ನಿಜದ ಮನೆಯೆನಲು |
ಅರಿತರಿತು ಅರುಹಾ ಮರೆದರೇ ನಯನವನು |
ಇರಿದುಕೊಂಡಂತೇ. ಸರ್ವಜ್ಞ || ೨೬೦ ||

ಹೇಲು ವೈಹತ್ತಿದಾ | ಬಾಲನಂತಿರಬೇಕು |
ಜಾಲ ಭ್ರಮೆಯಾನೊಡಗೂಡದಿದ್ದವನು |
ಶೂಲಿಯಂತಕ್ಕು. ಸರ್ವಜ್ಞ || ೨೬೧ ||

ಹಂಗವನು ತೊರೆದವಗೆ | ಅಂಗನೆಯರೂ ಬೇಡ |
ಭಂಗಾರ ಧಾನ್ಯಗಳು ಬೇಡ ಲೋಕದ |
ಸಂಗವೇ ಬೇಡ. ಸರ್ವಜ್ಞ || ೨೬೨ ||

ಕುಂಡಲಿಯು ಸವಿದವಗೆ | ಹೆಂಡತಿಯು ಗೊಡವ್ಯಾಕೆ |
ಖಂಡ ಸಕ್ಕರೆಯು ಮೆಲುವಗೆ ಗಾಣದ |
ಹಿಂಡಿ ಮತ್ತ್ಯಾಕೆ. ಸರ್ವಜ್ಞ || ೨೬೩ ||

ಮೂಲಮಂತ್ರವನೋದಿ | ಲೀಲೆಯೊಳ್ ಆಡುತಿಹ |
ಶೂಲಿಯು ಶರದಾಸತಿಯುಳ ತಾ ಹೇತ |
ಹೇಲೆಂದು ಹರಿವ. ಸರ್ವಜ್ಞ || ೨೬೪ ||

ಕಂಬಳಿಯು ಹೊದ್ದಂತೆ | ಇಂಬಿನೊಳಿರಬೇಕು |
ಹೆಂಬಲವುಗೊಂಡು ಎರಡಾಗೆ ನರಕದ |
ಕುಂಭಿನಂತಕ್ಕು. ಸರ್ವಜ್ಞ || ೨೬೫ ||

ಮಾತಿನಾ ಬೊಮ್ಮವನು | ತೂತಾದ ಮಡಿಕೆಯನು |
ಪಾತಕದ ನೆರವೀಯಿವು ಮೂರು ಲೋಕದೊಳು |
ಗ್ಯಾತಕ್ಯೂ ಬೇಡ. ಸರ್ವಜ್ಞ || ೨೬೬ ||

ಸಂನ್ಯಾಸತನಗೆಂಬ | ಅನ್ಯಾಯ ನುಡಿಯುತ |
ಪುನ್ನಂತ ದೇಹದಿರವರಿಯು ತನ್ನೊಡಲು |
ಅವ್ಯಯದಿ ಹೊರೆವ. ಸರ್ವಜ್ಞ || ೨೬೭ ||

ಅಟ್ಟ ಅಡುಗೆಯ ರುಚಿಯು । ಹುಟ್ಟು ತಾ ಬಲ್ಲುದೇ ।
ಶ್ರೇಷ್ಟರಂಶೆಂದೂಯೆನಬೇಡ ವರುಹಿನ ।
ದೃಷ್ಟಿ ಜೀರೆಂದ. ಸರ್ವಜ್ಞ ॥ ೨೬೮ ॥

ಹೇಳಲೂ ಕೇಳಲೂ । ಫಾಲಲೋಚನಗಳವೆ ।
ತಾಳದಂಡಿಯಾ ಹೊರಗಾದ ಕಳುವೆಯು ।
ಕೇಳುವನು ಹೆಡ್ಡ. ಸರ್ವಜ್ಞ ॥ ೨೬೯ ॥

ತತ್ತ್ವ ಹುಸಿಯಾದಡೆ । ಮುತ್ತೂ ಕೆಯಿ ಬೆಸೆಯುವುದೆ ।
ಉತ್ತಮರು ಹುಸಿಯು ಕಲಿತರೆ ಲೋಕ ಯಿ ।
ನ್ನೆತ್ತ ಸೇರುವುದೋ. ಸರ್ವಜ್ಞ ॥ ೨೭೦ ॥

ಚಂದನವ ಕರಗಿಸಲು । ಬೆಂದು ಪರಿಮಳವಕ್ಕು ।
ಸಂದರಿವನರಿದಾ ಸತ್ಪುರುಷರು ತಾವು ।
ನೊಂದು ಸೈರಿಪುದು. ಸರ್ವಜ್ಞ ॥ ೨೭೧ ॥

ಸಾವಿಂಗೆ ಸಮುತಿಂಗೆ । ಯಾವುದಂತರವಯ್ಯ ।
ಸಾವು ತಾ ಸಮುತಿಯೊಳಗಲ್ಲ ಕೋಪ ।
ಕಾವುದೇ ಸಮುತೀ. ಸರ್ವಜ್ಞ ॥ ೨೭೨ ॥

ಕೋಪವೆಂಬುದು ಕೇಳಿ । ಪಾಪದಾ ನೆಲೆಗೆಟ್ಟು ।
ಕೂಪದೊಳು ನೇಣುಹರಿದಂತೆ ನರಕಕ್ಕೆ ।
ಕೋಪಿ ತಾನಿಳಿವ. ಸರ್ವಜ್ಞ ॥ ೨೭೩ ॥

ಕೋಪವೆಂಬುದು ತಾ । ಪಾಪದ ನೆಲೆಗಟ್ಟು ।
ಆಪತ್ತೂ ಸುಖವೂ ಸಮವೆಂದು ಪೋಪಂಗೆ ।
ಪಾಪವೆಲ್ಲಿಯುದು. ಸರ್ವಜ್ಞ ॥ ೨೭೪ ॥

ಕೋಪಕ್ಕೆ ಯಮರಾಜ । ಪಾಪಕ್ಕೆ ಜವರಾಜ ।
ಕೋಪಪಾಪಗಳನಳಿದಂಗೆ ಯಮ ತಾ ।
ಕೂಪನಾಗಿಹನು. ಸರ್ವಜ್ಞ ॥ ೨೭೫ ॥

ಕೋಟಿಯಾ ಕೊಟ್ಟರೆ । ಕೂಟಕವಿರ್ಯಯು ಹೊಲ್ಲ ।
ನೋಟ ನಿಜದಲಿ ವನರಿದಂದ ಯೋಗಿಯು ।
ಕೂಟವೇ ಲೇಸು. ಸರ್ವಜ್ಞ. ॥ ೧೭೬ ॥

ಬಂದನ ಮಾಡಿದರೆ । ಸಂದ ಜ್ಞಾನಿಯೆ ಲೇಸು ।
ಹೊಂದಿ ಸಾಸಿರವ ಕೊಡುತಿರಲು ಗರ್ವಿಯಾ ।
ಸಂಧಾನ ಬೇಡ. ಸರ್ವಜ್ಞ ॥ ೧೭೭ ॥

ರಾತ್ರಿಯೊಳು ಶಿವರಾತ್ರಿ । ಜಾತ್ರೆಯೊಳು ಶ್ರೀಶೈಲ ।
ಕ್ಷೇತ್ರದೊಳು ಚೆಲುವ ಶ್ರೀಕಾಶಿ ಶಿವತತ್ವ ।
ಸ್ತೋತ್ರದೊಳಗಧಿಕ. ಸರ್ವಜ್ಞ ॥ ೧೭೮ ॥

ಒಡಲು ತಾನಳಿವಲ್ಲಿ । ಮಡದಿಯುರು ಮಡಿವಲ್ಲಿ ।
ಎಡರು ನಿಂದೆಗಳು ಬರುವಲ್ಲಿ ಸಮತೆಯನು ।
ಬಿಡದಿರೆ ಯೋಗಿ. ಸರ್ವಜ್ಞ ॥ ೧೭೯ ॥

ಹೇಳಬಲ್ಲವ ಬೋಳು । ಕೇಳಬಲ್ಲಡ ಬೋಳು ।
ಹೇಳಿಕೇಳುವದನರಿಯದಡೆ ಆ ಬೋಳು ।
ಕಾಳುಬೋಳೆಂದ. ಸರ್ವಜ್ಞ ॥ ೧೮೦ ॥

ಹೇಳಿದರೆ ಕೇಳುವನ । ಕೆಳಗಿರುವುದು ಲೇಸು ।
ಹೇಳಿದರೆ ಕೇಳದಿರಲವನೆ ಉಪ್ಪರಿಗೆ ।
ಮೇಲಿರಲೊಲ್ಲ. ಸರ್ವಜ್ಞ ॥ ೧೮೧ ॥

ತಿರಿದಡೆ ಕೂಳಕ್ಕು । ತೆರೆದಡೆ ಬೋಳಕ್ಕು ।
ಕರೆದಡೆ ದೊಡ್ಡ ಹೆಸರಕ್ಕು ಬಾರದೆ ।
ತಿರಿಗೊಳಕ್ಕು. ಸರ್ವಜ್ಞ ॥ ೧೮೨ ॥

ಅಜ್ಞೆಗೈಯಲು ಬೇಡ । ಯಾಗ ನಿಂದಿಸಬೇಡ ।
ನಾಗಭೂಷಣನ ಹಳಿದ ದಕ್ಷನ ಶಿರವ ।
ಹೋಗಿ ತಿಳಿಯಾರು. ಸರ್ವಜ್ಞ ॥ ೧೮೩ ॥

ಸತ್ಯವಂತರ ಚಿತ್ತ | ಉತ್ತಮವೆನಬೇಕು |
ಮುಕ್ತಿ ಶಿವಧ್ಯಾನ ಮಾಡಿದರೆ ಶಿವನಿಗಿಂ |
ದತ್ತಣವರಕ್ಕು. ಸರ್ವಜ್ಞ || ೨೮೪ ||

ಆ ದೆವ್ವ ಈ ದೆವ್ವ | ಮಾದೆವ್ವ ಎನಬೇಡ |
ದೇವರ ದೇವ ಜಗದೇವ ಪ್ರಾಣಿಗಳ |
ಕಾದವನೆ ದೇವ. ಸರ್ವಜ್ಞ || ೨೮೫ ||

ತೆಂಗಿಗೂ ಹಿರಿಯರಿಗು | ಹಂಗುಮಾಡಲೆಬೇಕು |
ತೆಂಗಿಗೆ ಬುಡದಿ ನೀರೆರೆಯೆ ತಲೆಯಲ್ಲಿ |
ಹಂಗು ತಿದ್ದುವದು. ಸರ್ವಜ್ಞ || ೨೮೬ ||

ಕಪ್ಪೆ ಮೀನುಗಳೆಲ್ಲ | ಇಪ್ಪುದದು ತೀರ್ಥವೆ |
ತುಪ್ಪೋಗರಿಕ್ಕೆ ಸಲಹುವ ಸತ್ಪುರುಷ |
ಇಪ್ಪುದದೆ ತೀರ್ಥ. ಸರ್ವಜ್ಞ || ೨೮೭ ||

ಸತ್ಯನುಡಿ ತೀರ್ಥ | ನಿತ್ಯರಾ ನಡೆ ತೀರ್ಥ |
ಉತ್ತಮರ ಸಂಗವದು ತೀರ್ಥ ಹರಿವ ನೀ |
ರೆತ್ತಣದ ತೀರ್ಥ. ಸರ್ವಜ್ಞ || ೨೮೮ ||

ಕಣ್ಣು ಮಾಡುವ ಕೃತ್ಯ | ಹಣ್ಣದಿಹುದೊಂದಿಲ್ಲ |
ತಣ್ಣಗಿಹ ಮನವನಲಿಸುವುದು ಲೋಕಕ್ಕೆ |
ಕಣ್ಣು ಕಾರಣವು. ಸರ್ವಜ್ಞ || ೨೮೯ ||

ಕಣ್ಣಿಂದ ಪಾಪವು | ಕಣ್ಣಿಂದ ಪುಣ್ಯವು |
ಕಣ್ಣಿಂದಲೇ ಅಹುದು ಇಹಪರವು ಲೋಕಕ್ಕೆ |
ಕಣ್ಣೆ ಕಾರಣವು. ಸರ್ವಜ್ಞ || ೨೯೦ ||

ವೇದಶಾಸ್ತ್ರಾಗಮವು | ಓದಿದರೆ ಫಲವೇನು |
ವಾದಿಸುವ ಸಮರವಿಲ್ಲದಿರ್ದಡೆ ಓದು |
ಬೂದಿಯು ಹೋಮ. ಸರ್ವಜ್ಞ || ೨೯೧ ||

ಒಡಲಹಿಡಿದಾಡದಿರು | ನುಡಿಯ ಹೋಗಾಡದಿರು |
ನಡೆಯೊಳೈವರನೂ ಬಿಡದಲಿರುವನಿವನಲ್ಲಿ |
ದೃಢವಂತನಾಗು. ಸರ್ವಜ್ಞ || ೨೯೨ ||

ಎಲ್ಲ ಆಶೆಯನು ಬಿ | ಟ್ಟಲ್ಲಿಯೆ ಕೈಲಾಸ |
ಎಲ್ಲವನು ಬಿಡದೆ ಭ್ರಮಿಸಿದಡೆ ನರಕ ತಾ |
ಇಲ್ಲಿಹುದೆಂದ. ಸರ್ವಜ್ಞ || ೨೯೩ ||

ಬಿಂದುನಾದಗಳೆಂಬ | ನಂದನವನವುಂಟು |
ಇಂದುಧರನೆಂಬಾ ಕೊಳವುಂಟು ಆ ನೀರ |
ಮಿಂದುಂಬರಿಲ್ಲ. ಸರ್ವಜ್ಞ || ೨೯೪ ||

ಮನದಲ್ಲಿ ನೆನೆದವಗೆ | ಮನೆಯೇನು ಮಠವೇನು |
ನೆನಹು ಇದ್ದರೆ ಸಾಕು ನೆನೆಯದವ ಪರ್ವತದ |
ಕೊನೆಯಲಿದ್ದೇನು. ಸರ್ವಜ್ಞ || ೨೯೫ ||

ಕರದಿ ಕಪ್ಪರವುಂಟು | ತಿರಿದುಣಲು ನಾಡುಂಟು |
ಹರನೆಂಬ ದೈವ ನಮಗುಂಟು ನಮಗಿಂತ |
ಸಿರಿವಂತರಾರೋ. ಸರ್ವಜ್ಞ || ೨೯೬ ||

ವ್ಯಾಪಾರವಳಿದಲ್ಲ | ದಾಪರವು ಕಾಣಿಸದು !
ಪಾಪಕರ್ಮಗಳ ತಿಳಿದು ನಿಂದವನಿಗೇ |
ಕೋಪವೆಲ್ಲಿಹುದು. ಸರ್ವಜ್ಞ || ೨೯೭ ||

ವಿಷಯದ ಪುಡಿಯವನು | ಪಿಸಿಮಾಡಿಕೊಳ್ಳಲೂ |
ಪಶುಪತಿಯಕ್ಕು ಪದವಕ್ಕು ಮೈಬಣ್ಣ |
ಮಿಸುನಿಯಂತಕ್ಕು. ಸರ್ವಜ್ಞ || ೨೯೮ ||

ಬಿಂದುವು ಮಾತ್ರವು ಒಂದೆ ನಾಳದಿ ಬರ್ಕು |
ಒಂದು ಬಿಟ್ಟೊಂದು ತಡೆದರೆ ಪರಬ್ರಹ್ಮ |
ಮುಂದೆ ಬಂದಕ್ಕು. ಸರ್ವಜ್ಞ || ೨೯೯ ||

ಕುರಿ ಕಬ್ಬಿನೊಳು ಹೊಕ್ಕಿ । ಅರಿವುದೇ ತನಿರಸವ ।
ಹೊರಗಣ ಸೋಗೆ ಮೆಲುವಂತೆ ತತ್ತ್ವದ ।
ಯಿರವರಿಯದವಗೆ. ಸರ್ವಜ್ಞ ॥ ೩೦೦ ॥

ಸತ್ಯರೂ ಹುಸಿದರೆ । ಒತ್ತಿ ಹರಿದರೆ ಶರಧಿ ।
ಉತ್ತಮರು ತಪ್ಪಿ ನಡೆದರೆ ಲೋಕಯಿ ।
ನೆತ್ತ ಸೇರುವುದೋ. ಸರ್ವಜ್ಞ ॥ ೩೦೧ ॥

ವಾರಣಾಸಿಗೆ ಹೋದ । ಕಾರಣವೇನಯ್ಯ ।
ಕಾರಣಾತ್ಮಕನು ತನ್ನೊಳಿರೆ ತಾ ಹೋದ ।
ಕಾರಣವೇನು. ಸರ್ವಜ್ಞ ॥ ೩೦೨ ॥

ಸತ್ತುಹೋದರೆ ನಿನಗೆ । ಯೆತ್ತಣದು ಮೋಕ್ಷವು ।
ಸತ್ತುಹೋಗದ ಮುನ್ನ ಮೋಕ್ಷದ ।
ಗೊತ್ತು ತಿಳಿಯೆಂದ. ಸರ್ವಜ್ಞ ॥ ೩೦೩ ॥

ಒಸೆದು ಪಂಚಾಕ್ಷರಿಯು । ಉಸುರು ಕೊನೆಯಲಿ ನಿಲಿಸಿ ।
ಸಸಿನೆ ಕುಳ್ಳಿರ್ದು ಜಪಿಸಿದ ಯೋಗಿ ತಾ ।
ಕಿಸವಾಯನಕ್ಕು. ಸರ್ವಜ್ಞ ॥ ೩೦೪ ॥

ತನ್ನ ನೋಡಲಿಯೆಂದು । ಕನ್ನಡಿಯ ಬಯಸುವುದೆ ।
ತನ್ನಲ್ಲಿ ಜ್ಞಾನವುದಿಸಿದ ಮಹಾತ್ಮನು ।
ಕನ್ನಡಿಯಂತೆ. ಸರ್ವಜ್ಞ ॥ ೩೦೫ ॥

**"ಸರ್ವಜ್ಞ ವಚನಗಳು":**— ಇದರ ಭಾಗ ೧, "ಒಂದಾಣೆ ಮಾಲೆ"ಯ 145ನೇ ಪುಸ್ತಕವಾಗಿಯೂ, ಭಾಗ ೨ "ಒಂದಾಣೆ ಮಾಲೆ"ಯ 239ನೇ ಪುಸ್ತಕವಾಗಿಯೂ ಪ್ರಕಟವಾಗಿವೆ. ಪುಸ್ತಕ ನಂಬ್ರ 258—ಸರ್ವಜ್ಞ ವಚನಗಳು ಭಾಗ ೩. ಅವುಗಳನ್ನೂ ಕೊಂಡುಕೊಳ್ಳಿರಿ.

# ಸಿಂಡಿಕೇಟ್ ಬೇಂಕ್

ಸ್ಥಾಪನೆ: ೧೯೨೫

ಒಟ್ಟು ವ್ಯವಹಾರ ಸಂಪತ್ತು
ರೂ. ೨೦ ಕೋಟಿಗೂ ಮಿಕ್ಕಿದೆ

ಶಾಖೆಗಳು: ೧೨೯

ಪ್ರಧಾನ ಕಾರ್ಯಾಲಯ
ಉಡುಪಿ, ಮೈಸೂರು ರಾಜ್ಯ

## ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್



**Edited, Printed & Published by K. V. Shenoy
at The Prabhat Printers, Ltd., Mangalore.**